ಬೆಂಗಳೂರು ನಗರ AUG 10, 2026, 11:03 AM IST

# ಹೆಬ್ಬಾಳ ಕೆರೆ ಒಡಲಿಗೆ ಕಿರು ಸುರಂಗ ಕಂಟಕ: ತಜ್ಞರು

ಎಸ್ಟೀಮ್ ಮಾಲ್‌ನಿಂದ ಪಶುವೈದ್ಯ ಮಹಾವಿದ್ಯಾಲಯವರೆಗೆ 2.2 ಕಿ.ಮೀ. ಸುರಂಗ ರಸ್ತೆ



ADVERTISEMENT

HDFC ERGO Optima Secure+

Get affordable health insurance from ₹31/day, trusted by 3.1 Cr+ customers Pan-India*

HDFC ERGO

TEAM UDAYAVANI

Share

**ಬೆಂಗಳೂರು**: ರಾಜಧಾನಿ ಬೆಂಗಳೂರಿನ ಸಂಚಾರ ದಟ್ಟಣೆ ತಗ್ಗಿಸುವ ನಿಟ್ಟಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ರೂಪಿಸಿರುವ ಕಿರು ಸುರಂಗ ಮಾರ್ಗ ಯೋಜನೆ ಹೆಬ್ಬಾಳ ಕೆರೆ ಒಂದು ಭಾಗದಲ್ಲಿ ಹಾಯ್ದು ಹೋಗಲಿದ್ದು, ಭವಿಷ್ಯತ್ತಿನಲ್ಲಿ ಹೆಬ್ಬಾಳ ಕೆರೆಯ ಅಂತರ್ಜಲ ಮರು ವೃದ್ಧಿಗೆ ಅಪಾಯ ಎದುರಾಗಲಿದೆ. ಜತೆಗೆ ಪ್ರವಾಹದ ಸಮಸ್ಯೆಗಳಿಗೆ ಕಾರಣವಾಗಬಹುದು ಎಂಬ ಆತಂಕವನ್ನು ತಜ್ಞರು ವ್ಯಕ್ತಪಡಿಸಿದ್ದಾರೆ.

ಹೆಬ್ಬಾಳದ ಎಸ್ಟೀಮ್ ಮಾಲ್‌ನಿಂದ ಪಶುವೈದ್ಯಕೀಯ ಮಹಾ ವಿದ್ಯಾಲಯವರೆಗೆ ನಿರ್ಮಿಸಲು ಉದ್ದೇಶಿಸಿರುವ 2.2 ಕಿ.ಮೀ ಉದ್ದದ ಕಿರು ಸುರಂಗ ರಸ್ತೆ ಯೋಜನೆಗೆ ಹೆಬ್ಬಾಳ ಕೆರೆ ಒಡಲಿನ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ. ಕೆರೆಯ ಪ್ರವಾಹ ತಡೆ ಸಾಮರ್ಥ್ಯಕ್ಕೆ ಅಪಾಯ ತಂದೊಡ್ಡಲಿದೆ. ಈ ಯೋಜನೆಯಿಂದ ಕೆರೆಯ ಜಲಾನಯನ ಪ್ರದೇಶ ಕುಗ್ಗಬಹುದು. ಅಂತರ್ಜಲ ಮರು ಪೂರಣ ವಲಯಗಳು ದುರ್ಬಲ ವಾಗಬಹುದು ಮತ್ತು ಈಗಾಗಲೇ ಪ್ರವಾಹಕ್ಕೆ ತುತ್ತಾಗುತ್ತಿರುವ ಉತ್ತರ ಬೆಂಗಳೂರಿನ ಪ್ರದೇಶಗಳಲ್ಲಿ ಪ್ರವಾಹದ ಸಮಸ್ಯೆ ಮತ್ತಷ್ಟು ಉಲ್ಬಣಿಸಬಹುದು ಎಂದು ತಜ್ಞರ ಎಚ್ಚರಿಕೆ ನೀಡಿದ್ದಾರೆ.

**ಕೆರೆ ಜೀವಂತಿಕೆ ಕುಂದಿ ಹೋಗಲಿದೆ:** ಬೆಂಗಳೂರಿನ ಹಲವು ಕಡೆಗಳಲ್ಲಿ ಮೆಟ್ರೋ ಯೋಜನೆ ಸೇರಿದಂತೆ ಮತ್ತಿತರ ಕಾರಣಕ್ಕಾಗಿ ಭೂಮಿ ಕೊರೆದು ಸುರಂಗ ಮಾರ್ಗ ರೂಪಿಸಲಾಗಿದೆ. ಈಗಾಗಲೇ ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಬಫ‌ರ್ ಝೋನ್ (ಸಂರಕ್ಷಿತ ವಲಯ) ಕಡಿಮೆಯಾಗಿದೆ. ಇದೀಗ ಸುರಂಗ ಮಾರ್ಗ ಯೋಜನೆ ಸೇರಿ ಮತ್ತಿತರ ಯೋಜನೆಗಳಿಗೆ ಕೆರೆಗಳನ್ನು ಬಳಸಿಕೊಂಡರೆ ನೀರು ನಿಲ್ಲುವುದು ಎಲ್ಲಿಂದಾ? ಅಂತ ರ್ಜಲದ ಮರು ಪೂರಣ ಎಲ್ಲಿಂದಾ? ಎಂದು ಬೆಂಗಳೂರು ವಿವಿ ಭೂ ವಿಜ್ಞಾನ ವಿಭಾಗದ ನಿವೃತ್ತ ಪ್ರೊ. ರೇಣುಕಾ ಪ್ರಸಾದ್ ಎಂದು ಪ್ರಶ್ನೆ ಮಾಡುತ್ತಾರೆ.

ಸುರಂಗ ಮಾರ್ಗ ಯೋಜನೆಯಿಂದ ಅಂತರ್ಜಲ ಮಟ್ಟ ಕುಸಿದು ಹೋಗಲಿದೆ. ಸುರಂಗ ಮಾರ್ಗ ನಿರ್ಮಾಣದಿಂದಾಗಿ ಮುಂದಿನ ದಿನಗಳಲ್ಲಿ ಕೆರೆಗೆ ನದಿ ತಟದ ಹೊರ ಭಾಗದಿಂದ ನೀರು ಬರುವುದು ನಿಂತು ಹೋಗುವ ಅಪಾಯವಿದೆ. ಹೊರಭಾಗದಿಂದ ಕೆರೆಗೆ ಬರುವ ನೀರನ್ನು ತಡೆಹಿಡಿದರೆ ದಿನೇ ದಿನೇ ಅಂತರ್ಜಲ ಮಟ್ಟಕುಂದಿ ಹೋಗಲಿದೆ. ಇದರಿಂದ ಜಲ ಮರು ಪೂರಣಕ್ಕೆ ಪೆಟ್ಟು ಬೀಳಲಿದೆ ಎನ್ನುತ್ತಾರೆ. ಕೆರೆಗಳನ್ನು ಉಳಿಸಿಕೊಳ್ಳಬೇಕಾದರೆ ಕೆರೆ ಸೇರುವ ಕಾಲುವೆಗಳನ್ನು ಉಳಿಸಿಕೊಳ್ಳಬೇಕು. ಕೆರೆಗಳು ಜೀವಂತವಾಗಿರಬೇಕಾದರೆ ಪ್ರಥಮ ಹಂತ ಕಾಲುವೆ ಇರಲೇಬೇಕೆಂದು ಹೇಳುತ್ತಾರೆ.

**ಸಮಗ್ರ ವೈಜ್ಞಾನಿಕ ಅಧ್ಯಯನ ಅಗತ್ಯ:** ಹೆಬ್ಬಾಳ ಕೆರೆಗೆ ವಿಶಾಲವಾದ ಜಲಾನಯನ ಪ್ರದೇಶವಿದ್ದು, ಮಲ್ಲೇಶ್ವರಂ, ಸದಾಶಿವನಗರ ಹಾಗೂ ಸುತ್ತಮುತ್ತಲಿನ ಹಲವು ಪ್ರದೇಶಗಳಿಂದ ಮಳೆನೀರು ಇಲ್ಲಿಗೆ ಹರಿದು ಬರುತ್ತದೆ. ಇಂತಹ ಪರಿಸರದ ದೃಷ್ಟಿಯಿಂದ ಸೂಕ್ಷ್ಮ ಪ್ರದೇಶದಲ್ಲಿ ಯಾವುದೇ ಹಸ್ತಕ್ಷೇಪ ಮಾಡುವ ಮೊದಲು ಸಮಗ್ರ ವೈಜ್ಞಾನಿಕ ಅಧ್ಯಯನ ನಡೆಸುವುದು ಅಗತ್ಯವಿದೆ ಎನ್ನುತ್ತಾರೆ ಜಲ ವಿಜ್ಞಾನ ತಜ್ಞರು.

ADVERTISEMENT

### ಮಾನ್ಯತಾ ಟೆಕ್ ಭಾಗದಲ್ಲಿ ಪ್ರವಾಹ ವೃದ್ಧಿಸಬಹುದು: ಜಲ ವಿಜ್ಞಾನ ತಜ್ಞರು

ಹೆಬ್ಬಾಳ ಕೆರೆ ಪ್ರದೇಶದ ಒಂದು ಭಾಗದ ಮೂಲಕ ಹಾದು ಹೋಗುವ ಪ್ರಸ್ತಾವಿತ ಕಿರು ಸುರಂಗ ರಸ್ತೆ ಯೋಜನೆ ಕೆರೆಯ ಜಲಾನಯನ ಪ್ರದೇಶವನ್ನು ಬದಲಾಯಿಸುವುದರ ಜೊತೆಗೆ ಪ್ರವಾಹವನ್ನು ತಡೆಹಿಡಿಯುವ ಕೆರೆಯ ಸಾಮರ್ಥಯವನ್ನು ಕಡಿಮೆ ಮಾಡಬಹುದು. ಹೆಬ್ಬಾಳ ಕೆರೆಯ ವಿಸ್ತೀರ್ಣ ಅಥವಾ ನೀರು ಸಂಗ್ರಹಿಸುವ ಸಾಮರ್ಥಯದಲ್ಲಿ ಯಾವುದೇ ಕಡಿತ ಉಂಟಾದರೆ, ಕೆರೆಯ ಕೆಳಭಾಗದಲ್ಲಿರುವ ಪ್ರವಾಹ ಪೀಡಿತ ಪ್ರದೇಶಗಳು ಅದರಲ್ಲೂ ವಿಶೇಷವಾಗಿ ಮಾನ್ಯತಾ ಟೆಕ್ ಪಾರ್ಕ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ರವಾಹದ ಪರಿಸ್ಥಿತಿ ಮತ್ತಷ್ಟು ಹದಗೆಡಬಹುದು ಎಂದು ಜಲ ವಿಜ್ಞಾನ ತಜ್ಞರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

### ಕೆರೆಗೆ ಹರಿದು ಬರುವ ಪ್ರಥಮ ಹಂತದ ಕಾಲುವೆಗಳೂ ಮುಚ್ಚಿ ಹೋಗುವ ಆತಂಕ

ಬಿಡಿಎ ಪ್ರಸ್ತಾಪಿಸಿರುವ ಕಿರು ಸುರಂಗ ಮಾರ್ಗ ಯೋಜನೆಯಿಂದ ಹೆಬ್ಬಾಳ ಕೆರೆಗೆ ಹರಿದು ಬರುವ ಪ್ರಥಮ ಹಂತದ ಕಾಲುವೆಗಳು ಮುಚ್ಚಿ ಹೋಗುವ ಭೀತಿಯಿದೆ. ಜತೆಗೆ ಕೆರೆ ಸುತ್ತಮುತ್ತಲಿನ ಬಫ‌ರ್ ಝೋನ್‌ಗೂ ಹೊಡೆತ ಬೀಳುತ್ತಿದೆ. ಹೀಗಾಗಿ ಬಿಡಿಎ ಹೆಬ್ಬಾಳ ಕೆರೆ ಭಾಗದಲ್ಲಿರುವ ಬಫ‌ರ್ ಝೋನ್ ಬಿಟ್ಟು ಕಿರು ಸುರಂಗ ಮಾರ್ಗ ಯೋಜನೆ ಕಾರ್ಯಗತ ಮಾಡಲಿ. ಬೆಂಗಳೂರಿನಲ್ಲಿ ಈಗಾಗಲೇ ಹಲವು ಕೆರೆಗಳು ಮುಚ್ಚಿಹೋಗಿವೆ. ಭವಿಷ್ಯತ್ತಿನ ದೃಷ್ಟಿಯಿಂದ ಈಗಿರುವ ಕೆರೆಗಳನ್ನು ಉಳಿಸಿಕೊಳ್ಳಬೇಕು. ಅಂತರ್ಜಲದ ಮಟ್ಟ ವೃದ್ಧಿಸುವ ಕೆಲಸ ಮಾಡಬೇಕು ಎನ್ನುತ್ತಾರೆ ಬೆಂಗಳೂರು ವಿವಿಯ ನಿವೃತ್ತ ಭೂ ವಿಜ್ಞಾನ ಪ್ರಾಧ್ಯಾಪಕ ಪ್ರೊ.ರೇಣುಕಾ ಪ್ರಸಾದ್.